# II Sem. B.Com. Examination, April/May 2012
## (Semester Scheme) (Prior to 2011–12)
## COMMERCE (Repeaters)
## Financial Accounting – II

Time : 3 Hours Max. Marks : 90

***Instruction:** Answer should be either in **Kannada** or in **English**.*

SECTION – A

Answer **any 10** of the following. **Each** question carries **2** marks. **(10×2=20)**

1. a) State any two merits of single entry system.

b) What do you mean by inter branch transaction ?

c) What is meant by fire claims ?

d) What are abnormal line of goods ?

e) Ascertain the opening stock when

Purchases 45000, wages 13,500, Sales 65,000, Closing stock 20,000, gross profit on sales is 25%.

f) Find out the actual claim in the following case :

| | |
|---|---|
| Value of insurance policy | ₹ 60,000 |
| Stock as on the date of fire | ₹ 85,000 |
| Value of stock saved from fire | ₹ 15,000 |

g) Ascertain credit sales when

| | |
|---|---|
| Opening Debtors | ₹ 50,000 |
| Cash received from debtors | ₹ 2,00,000 |
| Bills receivable dishonoured | ₹ 5,000 |
| Bad debts | ₹ 5,000 |
| Closing debtors | ₹ 75,000 |

h) Mention two objectives of branch account.

i) Mention four Indian Accounting standards.

j) Mention the basis of apportionment of the following expenses in case of departmental accounting.

i) Labour welfare expenses ii) Advertising.

k) What is Memorandum Trading Account ?

SECTION – B

Answer **any 5** of the following. **Each** question carries **5** marks. **(5×5=25)**

2. Mention any 5 features of single entry system.

3. Explain briefly any five Indian Accounting Standards.

4. Give Journal entries for the following Transactions in the books of the Head Office. The books are closed on 31-12-2008.

a) Goods sent by the Head Office on 28-12-08 worth Rs. 4,500 to Mangalore Branch, not received by the branch upto 31-12-08.

b) Dharwad branch paid Rs. 4,000 dividend to a local share holders on behalf of the Head Office.

c) Goods sent by Dharwad Branch to Mangalore branch for Rs. 9,000 are yet to be recorded.

d) Mangalore Branch paid Rs. 20,000 to a Head Office creditor.

e) Dharwad Branch collected Rs. 1,00,000 from a Head Office debtor.

5. From the following details drawn from the books of Prasad, you are required to ascertain the closing stock.

| | ₹ |
|---|---|
| Purchases made during the year | 11,000 |
| Sales made during the year | 16,500 |
| Opening stock | 1,000 |
| Wages | 250 |
| Indirect expenses | 350 |
| Rate of gross profit on sales | 1/2 |
| Returns inwards | 1,500 |
| Returns outwards | 1,000 |

6. 'X' LTD. with its Head Office in Mysore has a Branch at Mandya. You are given the following details relating to Mandya Branch for the year ended 31-12-10.

| | | ₹ |
|---|---|---|
| Stock at the Branch 1-1-10 | | 16,300 |
| Stock at Branch 31-12-10 | | 16,000 |
| Petty cash at branch 1-1-10 | | 55 |
| Goods sent to branch | | 22,800 |
| Goods returned by branch | | 1,950 |
| Cash sales at branch | | 35,800 |
| Cash sent to branch for expenses : | | |
| | ₹ | |
| Salaries | 6,400 | |
| Rent | 1,500 | |
| Petty cash | 1,800 | 9,700 |

Prepare Mandya Branch Account in the books of Head Office.

7. Fire occurred in the premises of Mr. 'Y' on 1st Nov. 2009. From the following details ascertain the claim to be lodged.

| | ₹ |
|---|---|
| Stock on 1-1-09 | 5,300 |
| Purchases upto 31-10-09 | 30,400 |
| Wages upto 31-10-09 | 1,500 |
| Freight upto 31-10-09 | 500 |
| Sales upto date of fire | 40,000 |
| The rate of gross profit is 25% on cost | – |
| Salvage | 2,800 |

8. From the following figures drawn from the books of Nandan, you are required to calculate credit sales.

| | ₹ |
|---|---|
| B.R in the beginning of the year | 3,900 |
| Debtors in the beginning of the year | 15,400 |
| B.R encashed during the year | 10,450 |
| Cash received from the debtor | 35,000 |
| Bad debts written off | 1,400 |
| Returns inwards | 4,350 |
| B.R dishonoured | 900 |
| B.R at the end of the year | 3,000 |
| Debtors at the end of the year | 12,750 |

9. Calculate gross profit percentage from the following information :

| **Particulars** | |
|---|---|
| Opening stock of goods | 80,000 |
| Purchases of goods | 5,66,000 |
| Wages paid | 1,00,000 |
| Direct expenses | 40,000 |
| Sales | 9,10,000 |
| Sales returns | 10,000 |
| Purchase returns | 6,000 |
| Closing stock | 60,000 |

## SECTION – C

Answer **any 3** of the following. **Each** question carries **15** marks. **(3×15=45)**

10. Ramu a general merchant doesnot maintain his books of accounts systematically. However the following information could be ascertained from his books of accounts for the year ended 31-3-11.

| **Particulars** | **Balances** on 1-4-10 | 31-3-11 |
|---|---|---|
| Plant and machinery | 31,500 | 31,500 |
| Stock | 14,000 | 12,250 |
| Debtors | 3,500 | 5,250 |
| Creditors | 8,750 | 8,155 |
| Bank | 7,000 | ? |

Transactions during the year ended 31-3-11 (Cash Transactions)

| | ₹ |
|---|---|
| Wages | 10,500 |
| Sundry expenses | 4,125 |
| Advertisement expenses | 1,960 |
| Rent paid | 4,375 |
| Purchase expenses | 4,305 |
| Cash received from debtors | 1,44,375 |
| Cash paid to creditors | 1,12,595 |
| Drawings | 5,460 |

Mr. Ramu drew goods worth ₹ 1365 from business during the year for his household purposes. The purchases returns ₹ 3,500, Sales returns ₹ 1,750. The plant and machinery have to be depreciated at 5%.

Prepare Trading and Profit and Loss Account for the year ended 31-3-11 and also a balance sheet as on the same date.

11. The Moon Enterprises had insured its goods for ₹ 1,60,000. There was an accidental fire in and its premises on Feb. 20, 2008, which destroyed a major portion of the goods. Calculate the amount of the claim to be lodged, based in the following information.

| **Particulars** | ₹ |
|---|---|
| Stock on 1-4-06 | 1,44,000 |
| Purchases during the year ended 31-3-07, | 5,84,000 |
| Purchases returns the year ended 31-3-07 | 8,000 |
| Stock on 31-3-07 | 2,01,600 |
| Sales during the year ended 31-3-07 | 6,56,000 |
| Sales returns during the year 31-3-07 | 16,000 |
| Purchases from 1-4-07 to 20-2-2008 | 1,34,400 |
| Sales from 1-4-07 to 20-2-08 | 1,64,800 |
| Sales returns from 1-4-07 to 20-2-08 | 6,400 |
| Salvage | 31,680 |

The stocks have always been valued at 90% of their original cost and the gross profit remained the same.

12. The Rani Departmental Stores has 3 departments, X Y Z. The following information relates to the 3 departments for the year ended 31-3-11. Calculate the departmental Net profits.

| **Particulars** | **Departments** | | |
|---|---|---|---|
| | **X** | **Y** | **Z** |
| | ₹ | ₹ | ₹ |
| Opening stock | 1,56,000 | 1,82,000 | 78,000 |
| Purchases | 1,82,000 | 1,95,000 | 1,22,200 |
| Sales | 3,12,000 | 2,60,000 | 1,56,000 |
| Direct expenses | 52,520 | 37,700 | 18,460 |
| Closing stock | 2,02,800 | 2,32,700 | 93,860 |

The total indirect expenses of the organisation for the above period was Rs. 36,400. Indirect expenses vary with sales.

13. Bangalore H.O. invoice goods to Mysore branch at 20% profit on sales. The branch sends daily cash to the H.O; All expenses are paid by the H.O; except for petty expenses, which met by the branch Manager. From the following particulars, prepare the branch account in the books of H.O.

**Assets on 1-1-2010 at Branch**

| | ₹ |
|---|---|
| Stock | 45,000 |
| Debtors | 27,000 |
| Cash | 1,200 |
| Furniture | 3,600 |
| **Transaction during 2010** | |
| Goods sent to branch invoice price | 2,40,000 |
| Goods returned to H.O. | 3,000 |
| Goods returned by debtors | 1,440 |
| Cash received from debtors | 90,000 |
| Cash sales | 1,50,000 |
| Total sales | 2,40,000 |
| Discount allowed to debtors | 900 |
| **Expenses paid by H.O.** | |
| Rent | 3,600 |
| Salary | 7,200 |
| Stationery | 900 |
| Petty expenses paid by branch | 840 |
| Stock on 31-12-10 invoice price | 42,000 |

Depreciate furniture at 10% P.A.

14. The following is the Trial Balance of the Ramanagarm Branch as at 31-3-12.

| **Particulars** | **Dr.** | **Cr.** |
|---|---|---|
| | ₹ | ₹ |
| Furniture | 5,600 | |
| Bank | 7,120 | |
| Rent | 3,840 | |
| Salaries | 6,000 | |
| DRS | 14,800 | |
| Creditors | | 7,400 |
| Office expenses | 1,880 | |
| Goods supplied to H.O. | | 24,000 |
| Purchases | 75,200 | |
| Sales | | 1,52,000 |
| Goods received from H.O. | 32,000 | |
| Stock on 1-4-11 | 24,000 | |
| H.O. Account | 12,960 | |
| | **1,83,400** | **1,83,400** |

Closing stock – ₹ 5,400, the branch account in the H.O. books on 31-3-12 stood at ₹ 1,840 (Dr.) goods worth ₹ 10,000 sent by the H.O. to Branch and remittance of Rs. 4,800 sent by branch to H.O. were in Transit.

Incorporate above Trial Balance of the Branch in H.O. and to give the Ramanagarm Branch account appearing finally in the books of H.O.

## ಕನ್ನಡ ಆವೃತ್ತಿ

### ವಿಭಾಗ - ಎ

ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು. (10×2=20)

1. a) ಏಕ ನಮೂನು ಪದ್ಧತಿಯ ಯಾವುದಾದರೂ ಎರಡು ಶ್ರೇಷ್ಠತೆಗಳನ್ನು ತಿಳಿಸಿರಿ.

b) ಅಂತರ ಶಾಖಾ ವ್ಯವಹಾರಗಳೆಂದರೇನು ?

c) ಬೆಂಕಿ ವಿಮೆಯ ನಷ್ಟ ಪರಿಹಾರ ಪಟ್ಟಿ ಎಂದರೇನು ?

d) ಸಾಮಾನ್ಯವಲ್ಲದ ಸರಕುಗಳೆಂದರೇನು ?

e) ಕೆಳಗಿನ ಮಾಹಿತಿಯಿಂದ ಪ್ರಾರಂಭಿಕ ದಾಸ್ತಾನನ್ನು ಕಂಡುಹಿಡಿಯಿರಿ.

ಖರೀದಿ 45,000, ಕೂಲಿ 13,500, ಮಾರಾಟ 65,000, ಅಂತಿಮ ದಾಸ್ತಾನು 20,000, ಸ್ಥೂಲ ಲಾಭ ಮಾರಾಟ ಬೆಲೆಯ ಶೇ. 25.

f) ಈ ಕೆಳಗಿನ ವಿವರಗಳಿಂದ ನಷ್ಟ ಪರಿಹಾರ ಪಟ್ಟಿ ತಯಾರಿಸಿ.

| | |
|---|---|
| ಪಾಲಿಸಿಯ ಮೊತ್ತ | ರೂ. 60,000 |
| ಒಟ್ಟು ದಾಸ್ತಾನಿನ ಮೌಲ್ಯ | ರೂ. 85,000 |
| ಬೆಂಕಿಯಿಂದ ಸಂರಕ್ಷಿಸಿದ ಸರಕಿನ ಮೌಲ್ಯ | ರೂ. 15,000. |

g) ಕೆಳಗಿನ ಮಾಹಿತಿಯಿಂದ ಉದ್ದರಿ ಮಾರಾಟವನ್ನು ಕಂಡು ಹಿಡಿಯಿರಿ.

| | |
|---|---|
| ಪ್ರಾರಂಭಿಕ ಸಾಲಗಾರರು | ರೂ. 50,000 |
| ನಗದು ಸಾಲಗಾರರಿಂದ | ರೂ. 2,00,000 |
| ಬರಬೇಕಾದ ಹುಂಡಿಗಳು ತಿರಸ್ಕಾರ | ರೂ. 5,000 |
| ಕೆಟ್ಟ ಸಾಲಗಳು | ರೂ. 5,000 |
| ಅಂತಿಮ ಸಾಲಗಾರರು | ರೂ. 75,000 |

h) ಶಾಖಾಪದ್ಧತಿಯ ಎರಡು ಉದ್ದೇಶಗಳನ್ನು ತಿಳಿಸಿ.

i) ನಾಲ್ಕು ಭಾರತೀಯ ಲೆಕ್ಕಮಾಪನಗಳನ್ನು ಹೆಸರಿಸಿ.

j) ವಿಭಾಗೀಯ ಲೆಕ್ಕಾಚಾರ ಲೆಕ್ಕಗಳಲ್ಲಿ ಯಾವ ಆಧಾರದ ಮೇಲೆ ಖರ್ಚುಗಳನ್ನು ಹಂಚುವಿರಿ ?

i) ಕಾರ್ಮಿಕರ ಕಲ್ಯಾಣ ವೆಚ್ಚ

ii) ಜಾಹೀರಾತು

k) ನಮೂನೆ ವ್ಯಾಪಾರ ಲೆಕ್ಕ ಎಂದರೇನು ?

ವಿಭಾಗ - ಬಿ

ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಐದು ಅಂಕಗಳು. **(5×5=25)**

2. ಒಂಟಿ ದಾಖಲಾತಿ ಪದ್ಧತಿಯ ಯಾವುದಾದರೂ ಐದು ಲಕ್ಷಣಗಳನ್ನು ಹೆಸರಿಸಿ.

3. ಯಾವುದಾದರೂ ಐದು ಭಾರತೀಯ ಲೆಕ್ಕ ಮಾಪಕಗಳನ್ನು ವಿವರಿಸಿ.

4. ಈ ಕೆಳಕಂಡ ವ್ಯವಹಾರಗಳಿಗೆ ಪ್ರಧಾನ ಕಛೇರಿ ಪುಸ್ತಕದಲ್ಲಿ ರೋಜು ನಮೂನೆಗಳನ್ನು ಕೊಡಿ. ಲೆಕ್ಕ ಪುಸ್ತಕಗಳು 31-12-2008 ಕ್ಕೆ ಆಖೈರುಗೊಳಿಸಲಾಗುತ್ತದೆ.

   a) ಪ್ರಧಾನ ಕಛೇರಿಯು ದಿನಾಂಕ 28-12-2008 ರಂದು ಮಂಗಳೂರು ಶಾಖೆಗೆ ರೂ. 4,500 ಸರಕು ಕಳುಹಿಸಿದೆ. ದಿನಾಂಕ31-12-2008 ರವರೆಗೂ ಶಾಖೆ ಇವುಗಳನ್ನು ಸ್ವೀಕರಿಸಿಲ್ಲ.

   b) ಸ್ಥಳೀಯ ಷೇರುದಾರನಿಗೆ ಧಾರವಾಡ ಶಾಖೆಯು ಪ್ರಧಾನ ಕಛೇರಿಯ ಪರವಾಗಿ ರೂ. 4,000 ಲಾಭಾಂಶವನ್ನು ಪಾವತಿಸಿದೆ.

   c) ಧಾರವಾಡ ಶಾಖೆಯಿಂದ ಮಂಗಳೂರು ಶಾಖೆಗೆ ಕಳುಹಿಸಿದ ರೂ. 9,000 ಬೆಲೆಯ ಸರಕನ್ನು ಇನ್ನೂ ದಾಖಲಿಸಿಲ್ಲ.

   d) ಪ್ರಧಾನ ಕಛೇರಿಯ ಸಾಲಿಗರಿಗೆ 20,000 ರೂ. ಗಳನ್ನು ಶಾಖೆಯು ಕೊಟ್ಟಿರುತ್ತದೆ.

   e) ರೂ. 1,00,000 ಗಳನ್ನು ಶಾಖೆಯ ಪ್ರಧಾನ ಕಛೇರಿಯ ಸಾಲಗಾರರಿಂದ ವಸೂಲಾತಿ ಮಾಡಲಾಗಿದೆ.

5. ಪ್ರಸಾದ ಎಂಬುವರ ಪುಸ್ತಕಗಳಿಂದ ಈ ಕೆಳಗಿನ ವಿವರಗಳಿಂದ ನೀವು ಆಖೈರು ಸರಕನ್ನು ಕಂಡು ಹಿಡಿಯಿರಿ.

| | ರೂ. |
|---|---|
| ವರ್ಷದಾಂತ್ಯಕ್ಕೆ ಮಾಡಿದ ಖರೀದಿಗಳು | 11,000 |
| ವರ್ಷದಾಂತ್ಯಕ್ಕೆ ಮಾಡಿದ ಮಾರಾಟಗಳು | 16,500 |
| ಪ್ರಾರಂಭಿಕ ಸರಕು | 1,000 |
| ಕೂಲಿ ಸಾಗಾಣಿಕೆ ವೆಚ್ಚ | 250 |
| ನೇರವಲ್ಲದ ಖರ್ಚುಗಳು | 350 |
| ಸ್ಥೂಲ ಲಾಭ ಅನುಪಾತ ಮೂಲ ಬೆಲೆಯ ಮೇಲೆ | 1/2 |
| ಒಳಬಂದ ಸರಕು ವಾಪಸಾತಿ | 1,500 |
| ಹೊರ ಹೋದ ಸರಕು ವಾಪಸಾತಿ | 1,000 |

6. 'X' ಲಿಮಿಟೆಡ್ ಎಂಬುದರ ಕೇಂದ್ರ ಕಛೇರಿ ಮೈಸೂರಿನಲ್ಲಿದ್ದು ಅದರ ಶಾಖೆ ಮಂಡ್ಯದಲ್ಲಿದೆ. ಮಂಡ್ಯ ಶಾಖೆಗೆ ಸಂಬಂಧಿಸಿದ ಈ ಕೆಳಗಿನ ವಿವರಗಳನ್ನು31-12-10 ರ ವರ್ಷಾಂತ್ಯಕ್ಕೆ ನಿಮಗೆ ನೀಡಲಾಗಿದೆ.

| | ರೂ. |
|---|---|
| ಸರಕು 1-1-10 ರಂದು ಶಾಖೆಯಲ್ಲಿ | 16,300 |
| ಶಾಖೆಯಲ್ಲಿನ ಅಲ್ಪ ನಗದು 1-1-10 ರಂದು | 55 |
| ಶಾಖೆಗೆ ರವಾನಿಸಿದ ಸರಕು | 22,800 |

| | |
|---|---|
| ಶಾಖೆಗೆ ವಾಪಸು ಮಾಡಿದ ಸರಕು | 1,950 |
| ಶಾಖೆಯಲ್ಲಿನ ನಗದು ಮಾರಾಟ | 35,800 |
| ಶಾಖೆಯಲ್ಲಿನ ಸರಕು 31-12-10 | 16,000 |

ಖರ್ಚುಗಳಿಗಾಗಿ ಶಾಖೆಗೆ ಕಳುಹಿಸಿದ ನಗದು ರೂ.

| | ರೂ. | |
|---|---|---|
| ಸಂಬಳಗಳು | 6,400 | |
| ಬಾಡಿಗೆ | 1,500 | |
| ಅಲ್ಪ ನಗದು | 1,800 | 9,700 |

ಕೇಂದ್ರ ಕಛೇರಿಯ ಪುಸ್ತಕದಲ್ಲಿ ಮಂಡ್ಯ ಶಾಖೆ ಲೆಕ್ಕವನ್ನು ತಯಾರಿಸಿ.

7. 'Y' ಎಂಬುದರ ದಾಸ್ತಾನು ಶೇಖರಿಸಿದ್ದ ಉಗ್ರಾಣಕ್ಕೆ ದಿನಾಂಕ 1-11-09 ರಂದು ಬೆಂಕಿ ತಗಲಿತು. ಈ ಕೆಳಗಿನ ವಿವರಗಳಿಂದ ನಷ್ಟ ಪರಿಹಾರ ಬೇಡಿಕೆಯನ್ನು ಕಂಡುಹಿಡಿಯಿರಿ.

| | ರೂ. |
|---|---|
| ಸರಕು 1-1-09 | 5,300 |
| ಖರೀದಿಗಳು 31-10-09 ರವರೆಗೆ | 30,400 |
| ಕೂಲಿ 31-10-09 ರವರೆಗೆ | 1,500 |
| ಒಳಸಾಗಾಣಿಕೆ ವೆಚ್ಚ 31-10-09 ರವರೆಗೆ | 500 |
| ಮಾರಾಟಗಳು 31-10-09 | 40,000 |
| ಸ್ಥೂಲ ಲಾಭ ಅನುಪಾತ ಮೂಲ ಬೆಲೆ | 25% |
| ಬೆಂಕಿಯ ಅನಾಹುತದಿಂದ ಹೊರತುಪಡಿಸಿದ ಸರಕು | 2,800 |

8. ನಂದನ ಎಂಬುವರ ಪುಸ್ತಕಗಳಿಂದ ಶೇಖರಿಸಿದ ಈ ಕೆಳಗಿನ ಅಂಕಿಅಂಶಗಳಿಂದ ನೀವು ಉದ್ದರಿ ಮಾರಾಟಗಳನ್ನು ಕಂಡು ಹಿಡಿಯಿರಿ.

| | ರೂ. |
|---|---|
| ಪ್ರಾರಂಭಿಕ ಬರಬೇಕಾದ ಹುಂಡಿಗಳು | 3,900 |
| ಪ್ರಾರಂಭಿಕ ಋಣಿಗಳು | 15,400 |
| ಬರಬೇಕಾದ ಹುಂಡಿ ನಗದು ಮಾಡಿದ್ದು | 10,450 |
| ಋಣಿಗಳಿಂದ ಪಡೆದ ನಗದು | 35,000 |
| ಕರಡು ಸಾಲ | 1,400 |
| ಋಣಿಗಳಿಂದ ವಾಪಸಾದದ್ದು | 4,350 |
| ಬರಬೇಕಾದ ಹುಂಡಿಗಳ ತಿರಸ್ಕಾರ | 900 |
| ಅಂತಿಮ ಬರಬೇಕಾದ ಹುಂಡಿಗಳು | 3,000 |
| ಅಂತಿಮ ಋಣಿಗಳು | 12,750 |

9. ಒಂದು ವ್ಯಾಪಾರದ ಮಾಹಿತಿಯಿಂದ ಒಟ್ಟು ಲಾಭದ ಪ್ರಮಾಣವನ್ನು ಕಂಡು ಹಿಡಿಯಿರಿ.

| | ರೂ. |
|---|---|
| ಆರಂಭದ ಸರಕು | 80,000 |
| ಕೊಂಡ ಸರಕು | 5,66,000 |
| ಕೂಲಿ | 1,00,000 |
| ನೇರ ಖರ್ಚು | 40,000 |
| ಸರಕು ಮಾರಾಟ | 9,10,000 |
| ಅಂತ್ಯದ ಸರಕು ದಾಸ್ತಾನು | 60,000 |
| ಹೊರ ಹೋದ ಸರಕು ವಾಪಸಾತಿ | 10,000 |
| ಒಳಬಂದ ಸರಕು ವಾಪಸಾತಿ | 6,000 |

## ವಿಭಾಗ - ಸಿ

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **15** ಅಂಕಗಳು. **(3×15=45)**

10. ರಾಮು ವ್ಯಾಪಾರಿಯು, ತನ್ನ ವ್ಯಾಪಾರದ ಲೆಕ್ಕವನ್ನು ಸರಿಯಾಗಿ ನಿರ್ವಹಿಸಿಲ್ಲ, ಆದರೆ ಅವರ ಪುಸ್ತಕದಲ್ಲಿ ಮಾರ್ಚ್ 31-3-11 ಕ್ಕೆ ಈ ಕೆಳಕಂಡ ಮಾಹಿತಿಯು ಲಭ್ಯವಿರುತ್ತದೆ.

| ಮಾಹಿತಿ : | 1-4-10 | 31-3-11 |
|---|---|---|
| ಸ್ಥಾವರಗಳು | 31,500 | 31,500 |
| ದಾಸ್ತಾನು | 14,000 | 12,250 |
| ಸಾಲಗಾರರು | 3,500 | 5,250 |
| ಧನಿಗಳು | 8,750 | 8,155 |
| ಬ್ಯಾಂಕ್ ಖಾತೆ | 7,000 | ? |

ಮಾರ್ಚ್ 31, 2011 ಕ್ಕೆ ನಗದು ವ್ಯವಹಾರಗಳು :

| | ರೂ. |
|---|---|
| ಕೂಲಿ | 10,500 |
| ಇತರೆ ಖರ್ಚುಗಳು | 4,125 |
| ಜಾಹೀರಾತು | 1,960 |
| ಬಾಡಿಗೆ | 4,375 |
| ಕೊಳ್ಳಿಕೆ ಖರ್ಚು | 4,305 |
| ಸಾಲಗಾರರ ಖಾತೆಯಿಂದ ಪಡೆದ ನಗದು | 1,44,375 |
| ಸಾಲಿಗರ ಖಾತೆಗೆ ಕೊಟ್ಟ ನಗದು | 1,12,595 |
| ಸ್ವಂತ ಬಳಕೆಗೆ | 5,460 |

1365 ರೂ. ಗಳ ಮೌಲ್ಯದ ಸರಕುಗಳನ್ನು ರಾಮು ಸ್ವಂತಕ್ಕೆ ತಮ್ಮ ವ್ಯಾಪಾರದ ಸರಕುಗಳನ್ನು ಬಳಸಿಕೊಂಡಿದ್ದರು. ಖರೀದಿ ವಾಪಸಾತಿ – 3,500, ಮಾರಾಟ ವಾಪಸಾತಿ – 1,750 ಸ್ಥಾವರಗಳನ್ನು ಶೇಕಡ5 ರಷ್ಟು ಸವಕಳಿ ಮಾಡಿರಿ. ಮಾರ್ಚ್ 31, 2011 ಕ್ಕೆ ಲಾಭನಷ್ಟ ಖಾತೆ ಹಾಗೂ ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿರಿ.

11. ಮೂನ್ ಎಂಟರ್‌ಪ್ರೈಸಸ್ ತನ್ನ ಅಗ್ನಿ ವಿಮೆಯನ್ನು 1,60,000 ರೂ. ಗಳಿಗೆ ತೆಗೆದುಕೊಂಡಿರುತ್ತದೆ. 20-2-08 ರಲ್ಲಿ ಸಂಸ್ಥೆಯ ಆವರಣದಲ್ಲಿ ಆಕಸ್ಮಿಕವಾಗಿ ಬೆಂಕಿ ಅನಾಹುತವಾಗಿ ಬಹುಭಾಗ ಹಾಳಾದವು. ಈ ಕೆಳಕೊಟ್ಟಿರುವ ಮಾಹಿತಿಯಿಂದ ಅಗ್ನಿ ವಿಮೆ ಬೇಡಿಕೆ ಮೊತ್ತವನ್ನು ಕಂಡು ಹಿಡಿಯಿರಿ.

| ಮಾಹಿತಿಗಳು | ರೂ.ಗಳು |
|---|---|
| ದಾಸ್ತಾನು 1-4-06 | 1,44,000 |
| ಖರೀದಿ 31-3-07 ರ ವರೆಗೆ | 5,84,000 |
| ಖರೀದಿ ವಾಪಸಾತಿ 31-3-07 ರ ವರೆಗೆ | 8,000 |
| ದಾಸ್ತಾನು 31-3-07 ಕ್ಕೆ | 2,01,600 |
| ಮಾರಾಟ 31-3-07 ರ ವರೆಗೆ | 6,56,000 |
| ಮಾರಾಟ ವಾಪಸಾತಿ 31-3-07 ರವರೆಗೆ | 16,000 |
| ಖರೀದಿ 1-4-07 ರಿಂದ 20-2-08 ರ ವರೆಗೆ | 1,34,400 |
| ಮಾರಾಟ – 1-4-7 ರಿಂದ 20-2-08 ವರೆಗೆ | 1,64,800 |
| ಮಾರಾಟ ವಾಪಸಾತಿ – 1-4-7 ರಿಂದ 20-2-08 ವರೆಗೆ | 6,400 |
| ಸಂರಕ್ಷಿಸಿದ ಸರಕಿನ ಬೆಲೆ | 31,680 |

ಯಾವಾಗಲೂ ದಾಸ್ತಾನು ಶೇ. 90 ರಷ್ಟು ಮೂಲ ಅಸಲಿನ – ಬೆಲೆಯ ಆಧಾರದ ಮೇಲೆ ಮೌಲ್ಯ ಮಾಡಲಾಗಿದೆ.

12. ರಾಣಿ ಅಂಗಡಿಯು ಮೂರು ವಿವಿಧ ಇಲಾಖೆಗಳನ್ನು ಹೊಂದಿವೆ. ಅವುಗಳು X, Y, Z. ಈ ಕೆಳಕಂಡ ಮಾಹಿತಿಯಿಂದ ವಿವಿಧ ಇಲಾಖೆಗಳ ಲಾಭವನ್ನು 31-3-11 ಕ್ಕೆ ಕಂಡು ಹಿಡಿಯಿರಿ.

| ಮಾಹಿತಿ | ಇಲಾಖೆಗಳು | | |
|---|---|---|---|
| | X | Y | Z |
| | ರೂ. | ರೂ. | ರೂ. |
| ಆರಂಭದ ದಾಸ್ತಾನು | 1,56,000 | 1,82,000 | 78,000 |
| ಕೊಂಡ ಸರಕು | 1,82,000 | 1,95,000 | 1,22,200 |
| ಸರಕು ಮಾರಾಟ | 3,12,000 | 2,60,000 | 1,56,000 |
| ನೇರ ಖರ್ಚು | 52,520 | 37,700 | 18,460 |
| ಅಂತ್ಯದ ದಾಸ್ತಾನು | 2,02,800 | 2,32,700 | 93,860 |

ಒಟ್ಟು ಪರೋಕ್ಷ ಖರ್ಚುಗಳು 36,400 ರೂ.ಗಳು ಪರೋಕ್ಷ ಖರ್ಚುಗಳು ಸರಕು ಮಾರಾಟ ಮೇಲೆ ಅವಲಂಬಿತವಾಗಿದೆ.

13. ಬೆಂಗಳೂರಿನಲ್ಲಿ ಪ್ರಧಾನ ಕಛೇರಿಯಿರುವ ಒಂದು ಕಂಪನಿಯು ತನ್ನ ಮೈಸೂರು ಶಾಖೆಗೆ ಸರಕನ್ನು ಮಾರಾಟ ಬೆಲೆಯ ಮೇಲೆ ಶೇ. 20 ಲಾಭಾಂಶ ಬೆಲೆಯಲ್ಲಿ ರವಾನಿಸುತ್ತದೆ. ಶಾಖೆಯ ದೈನಂದಿನ ವ್ಯವಹಾರಗಳಿಂದ ಗಳಿಸಿದ

ಎಲ್ಲಾ ನಗದು ಅಂದೇ ಪ್ರಧಾನ ಕಛೇರಿಗಳಿಗೆ ಕಳುಹಿಸುವುದು. ಶಾಖೆಯ ಎಲ್ಲಾ ಖರ್ಚುಗಳನ್ನು ಪ್ರಧಾನ ಕಛೇರಿ ಕೊಡುತ್ತದೆ. ಆದರೆ ಚಿಲ್ಲರೆ ಖರ್ಚುಗಳನ್ನು ಶಾಖೆಯ ಮ್ಯಾನೇಜರ್ ಭರಿಸುವುದು. ಈ ಕೆಳಗಿನ ಮಾಹಿತಿಯನ್ನು ಬಳಸಿ ಪ್ರಧಾನ ಕಛೇರಿ ಪುಸ್ತಕದಲ್ಲಿ ಮೈಸೂರು ಶಾಖೆಯ ಲೆಕ್ಕವನ್ನು ಬರೆಯಿರಿ.

| **ಪ್ರಾರಂಭಿಕ ಆಸ್ತಿಗಳು ಶಾಖೆಯಲ್ಲಿ** | **ರೂ.** |
|---|---|
| ಸರಕು 1-1-2010 (Invoice price) | 45,000 |
| ಋಣಿಗಳು 1-1-2010 | 27,000 |
| ನಗದು 1-1-2010 | 1,200 |
| ಪೀಠೋಪಕರಣಗಳು 1-1-2010 | 3,600 |
| **ಪ್ರಧಾನ ಕಛೇರಿಯಿಂದ ಶಾಖೆ** (Invoice price) | |
| ಸ್ವೀಕರಿಸಿದ ಸರಕು | 2,40,000 |
| ಪ್ರಧಾನ ಕಛೇರಿಗೆ ಹಿಂತಿರುಗಿಸಿದ ಸರಕು | 3,000 |
| ಋಣಿಗಳಿಂದ ವಾಪಸಾದ ಸರಕು | 1,440 |
| ಋಣಿಗಳಿಂದ ಸ್ವೀಕರಿಸಿದ ನಗದು | 90,000 |
| ನಗದು ಮಾರಾಟ | 1,50,000 |
| ಒಟ್ಟು ಮಾರಾಟ | 2,40,000 |
| ಋಣಿಗಳಿಗೆ ಬಿಟ್ಟ ಸೋಡಿ | 900 |
| **ಖರ್ಚಿಗಾಗಿ ಪ್ರಧಾನ ಕಛೇರಿಯಿಂದ ಪಾವತಿ :** | |
| ಬಾಡಿಗೆ | 3,600 |
| ಸಂಬಳ | 7,200 |
| ಸಲಕರಣೆಗಳಿಗೆ | 900 |
| ಚಿಲ್ಲರೆ ಖರ್ಚು ಶಾಖೆ ಪಾವತಿಸಿದ್ದು | 840 |
| ಸರಕು 31-12-10 ರಂದು | 42,000 |

ಪೀಠೋಪಕರಣಗಳ ಮೇಲೆ ಶೇ. 10 ರ ಸವಕಳಿ– ಕಳೆಯಿರಿ –

14. ರಾಮನಗರಂ ಶಾಖೆಯ ತಾಳೆಪಟ್ಟಿಯು 31-3-12 ರಂದು ಕೆಳಕಂಡಂತಿದೆ.

| ವಿವರಗಳು | Dr. | Cr. |
|---|---|---|
| | ರೂ. | ರೂ. |
| ಪೀಠೋಪಕರಣಗಳು | 5,600 | |
| ಬ್ಯಾಂಕ್ | 7,120 | |
| ಬಾಡಿಗೆ | 3,840 | |
| ಸಂಬಳ | 6,000 | |
| ಸಾಲಗಾರರು | 14,800 | |
| ಸಾಲಿಗರು | | 7,400 |
| ಕಛೇರಿಯ ಖರ್ಚುಗಳು | 1,880 | |
| ಪ್ರಧಾನ ಕಛೇರಿಗೆ ಸರಕನ್ನು ಒದಗಿಸಿದ್ದು | | 24,000 |
| ಖರೀದಿ | 75,200 | |
| ಮಾರಾಟ | | 1,52,000 |
| ಪ್ರಧಾನ ಕಛೇರಿಯಿಂದ ಸರಕನ್ನು ಪಡೆದದ್ದು | 32,000 | |
| ದಾಸ್ತಾನು 1-4-11 | 24,000 | |
| ಪ್ರಧಾನ ಕಛೇರಿಯ ಶಾಖೆ | 12,960 | |
| | **1,83,400** | **1,83,400** |

ಅಂತಿಮ ದಾಸ್ತಾನು ಬೆಲೆ ರೂ. 5,400, ಪ್ರಧಾನ ಕಛೇರಿಯ ಪುಸ್ತಕದಲ್ಲಿ 31-3-12 ರಂದು ಶಾಖೆಯ ಖಾತೆಯು ರೂ. 1,840 (Dr) ರಷ್ಟಿತ್ತು. ಪ್ರಧಾನ ಕಛೇರಿಯು ರೂ. 10,000 ರಷ್ಟು ಸರಕನ್ನು ಶಾಖೆಗೆ ಕಳುಹಿಸಿದ್ದು ಮತ್ತು ಶಾಖೆಯು ಪ್ರಧಾನ ಕಛೇರಿಗೆ ಕಳುಹಿಸಿದ ನಗದು ರೂ. 4,800 ಮಾರ್ಗ ಮಧ್ಯದಲ್ಲಿತ್ತು.

ಮೇಲಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ತಾಳೆಪಟ್ಟಿಯನ್ನು ರಾಮನಗರಂ ಶಾಖಾ ಖಾತೆಯು ಪ್ರಧಾನ ಕಛೇರಿಯ ಅಂತಿಮ ಪುಸ್ತಕದಲ್ಲಿ ತೋರಿಸಿ.